ಬೆಂಬಲ ಬೆಲೆಯು ಸರಿಯಿದೆ. ಈ ಬೆಂಬಲ ಬೆಲೆಯನ್ನು ಸರ್ಕಾರ market rateನಲ್ಲಿ ಕೊಡುತ್ತಿದೆ. ಆದರೆ, ಬೆಂಬಲ ಬೆಲೆಯನ್ನು ಕೊಡುವುದು ಶೀಘ್ರದಲ್ಲಿ ಆಗಬೇಕಾಗಿತ್ತು.

9. ಪ್ರಕಟಣೆ

2009 ನೇ ಸಾಲಿನ ಕರ್ನಾಟಕ ಪೌರ ನಿಗಮಗಳ ತಿದ್ದುಪಡಿ ವಿಧೇಯಕವನ್ನು ವಿಧಾನಪರಿಷತ್ತು ಅಂಗೀಕರಿಸುವ ಬಗ್ಗೆ :

ಅಧ್ಯಕ್ಷರು :- ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2009ನೇ ಸಾಲಿನ ಕರ್ನಾಟಕ ಪೌರ ನಿಗಮಗಳ ತಿದ್ದುಪಡಿ ವಿದೇಯಕವನ್ನು ಈ ದಿನ ದಿನಾಂಕ 23-1-2009ರಂದು ಯಾವುದೇ ತಿದ್ದುಪಡಿ ಇಲ್ಲದೇ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

10. ಗಮನ ಸೆಳೆಯುವ ಸೂಚನೆ

(ಅ) ವಿಷಯ: ಮಲಪ್ರಭಾ ಯೋಜನೆಯಡಿಯಲ್ಲಿ ನಿರ್ಮಾಣ ಮಾಡಿರುವ ಕಾಲುವೆಗಳಲ್ಲಿ ನೀರನ್ನು ಹರಿಸಿ ರೈತರಿಗೆ ನೀರಾವರಿ ಸೌಲಭ್ಯವನ್ನು ಒದಗಿಸುವ ಬಗ್ಗೆ :

ಶ್ರೀ ಶಂಕರ ಪಾಟೀಲ್ ಮುನೇನಕೊಪ್ಪ (ನವಲಗುಂದ) :- ಮಲಪ್ರಭ ಯೋಜನೆಯಡಿಯಲ್ಲಿ ನಿರ್ಮಾಣಮಾಡಿರುವ ಕಾಲುವೆಗಳಲ್ಲಿ ನೀರನ್ನು ಹರಿಸಿ ರೈತರಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲು ಮಾನ್ಯ ಜಲ ಸಂಪನ್ಮೂಲ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಸವರಾಜ ಎಸ್.ಬೊಮ್ಮಾಯಿ :- ಮಾನ್ಯ ಅಧ್ಯಕ್ಷರೆ,. . . .

ಮಲಪ್ರಭಾ ಯೋಜನೆಯಿಂದ ನವಲಗುಂದ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬ್ಯಾಹಟ್ಟಿ ವಿಭಾಗದಡಿ 25458 ಹೆಕ್ಟೇರ್, ನವಲಗುಂದ ವಿಭಾಗದಡಿಯಲ್ಲಿ 11854 ಹೆಕ್ಟೇರ್ ಹಾಗೂ ನರಗುಂದ ವಿಭಾಗದ ಅಡಿಯಲ್ಲಿ 7436 ಹೆಕ್ಟೇರ್ ಹೀಗೆ ಒಟ್ಟು 44748 ಹೆಕ್ಟೇರ್ ಪ್ರದೇಶವು ನೀರಾವರಿಗೆ ಒಳಪಡುತ್ತದೆ. ಇದರಲ್ಲಿ ಬ್ಯಾಹಟ್ಟಿ ವಿಭಾಗದ 25458 ಹೆಕ್ಟೇರ್ ಹಾಗೂ ನವಲಗುಂದ ವಿಭಾಗದ 11854 ಹೆಕ್ಟೇರ್

ಪ್ರದೇಶವು ನೀರಾವರಿಯಾಗುತ್ತದೆ. ನರಗುಂದ ವಿಭಾಗದ ವಿಭಾಗದ ವ್ಯಾಪ್ತಿಯಲ್ಲಿ ನರಗುಂದ ಶಾಖಾ ಕಾಲುವೆಯ ಡಿ-6 ಹಂಚಿಕೆ ಅಡಿಯಲ್ಲಿ 4016 ಹೆಕ್ಟೇರ್ ಪ್ರದೇಶವು ನೀರಾವರಿಗೆ ಒಳಪಡುತ್ತಿದ್ದು ಕಾಲುವೆ ಕೊನೆಯ ಭಾಗದ 3420 ಹೆಕ್ಟೇರ್ ಪ್ರದೇಶವು ನೀರಾವರಿ ವಂಚಿತ ಪ್ರದೇಶವಾಗಿರುತ್ತದೆ.

ಮಲಪ್ರಭಾ ಬಲದಂಡೆ ಕಾಲುವೆಯ ಕಿ.ಮೀ 9 ರಿಂದ 32ರ ವರೆಗಿನ ಕಾಲುವೆ ಸುಧಾರಣಾ ಕಾಮಗಾರಿಗಳು ಪೂರ್ಣಗೊಂಡಿದ್ದು ಕಿ.ಮೀ 33 ರಿಂದ 60ರ ವರೆಗೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಕಿ.ಮೀ 61 ರಿಂದ 78ರ ವರೆಗೆ ಟೆಂಡರ್ ಕರೆದಿದ್ದು ಟೆಂಡರ್ ಅನುಮೋದನೆಯಾಗಬೇಕಾಗಿರುತ್ತದೆ.

ನಗರದ ಶಾಖಾ ಕಾಲುವೆಯ ಡಿ-6 ಹಂಚಿಕೆಯ ಕಿ.ಮೀ 1 ರಿಂದ 5 ರವರೆಗೆ ಸುಧಾರಣಾ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಈ ವರ್ಷದ ನೀರಾವರಿ ಹಂಗಾಮಿನಲ್ಲಿ ದಿನಾಂಕ 26-09-2008 ರಂದು ಕಾಲುವೆಗೆ ನೀರನ್ನು ಹರಿಸಲಾಗಿದ್ದು ದಿನಾಂಕ10-02-2009 ಕ್ಕೆ ಕೊನೆಗೊಳ್ಳುತ್ತದೆ. ಈಗ ಬ್ಯಾಹಟ್ಟಿ ವಿಭಾಗದ 25458 ಹೆಕ್ಟೇರ್, ನವಲಗುಂದ ವಿಭಾಗದ 11854 ಹೆಕ್ಟೇರ್ ಹಾಗೂ ನರಗುಂದ ವಿಭಾಗದ ನರಗುಂದ ಶಾಖಾ ಕಾಲುವೆಯ ಡಿ-6 ಹಂಚಿಕೆ ಅಡಿಯಲ್ಲಿ 4016 ಹೆಕ್ಟೇರ್ ಪ್ರದೇಶ ಹೀಗೆ ಒಟ್ಟು 41328 ಹೆಕ್ಟೇರ್ ಪ್ರದೇಶಕ್ಕೆ ನೀರನ್ನು ಒದಗಿಸಲಾಗಿರುತ್ತದೆ. ಉಳಿದ 3420 ಹೆಕ್ಟೇರ್ ಪ್ರದೇಶಕ್ಕೆ ನೀರನ್ನು ಒದಗಿಸಲು ಸಾಧ್ಯವಾಗಿರುವುದಿಲ್ಲ. ಮಲಪ್ರಭಾ ಯೋಜನೆಗೆ ಮೊದಲು 44 ಟಿ.ಎಂ.ಸಿ ನೀರಿನ ಹಂಚಿಕೆ ಇದ್ದು ಅದರ ಪ್ರಕಾರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಮಲಪ್ರಭಾ ನದಿಯ ನೀರಿನ ಒಳಹರಿವಿನ ಪ್ರಮಾಣ ಕಡಿಮೆಯಾಗಿದ್ದು ಈಗ ಮಲಪ್ರಭಾ ಯೋಜನೆಗೆ ಕೇವಲ 27 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡಲಾಗಿದೆ. ಆದ್ದರಿಂದ ನೀರಾವರಿ ಒಳಪಡುವ ಕ್ಷೇತ್ರಕ್ಕೆ ನೀರನ್ನು ಒದಗಿಸುವಲ್ಲಿ ವ್ಯತ್ಯಯವಾಗಿರುತ್ತದೆ. ಈ ದಿಶೆಯಲ್ಲಿ ನೀರಾವರಿ ವಂಚಿತ ಪ್ರದೇಶಕ್ಕೆ ನೀರನ್ನು ಒದಗಿಸುವ ಕುರಿತು ಪರ್ಯಾಯ ವ್ಯವಸ್ಥೆಗಾಗಿ ಯೋಚಿಸಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಈ ಕುರಿತು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಶಂಕರ ಪಾಟೀಲ್ ಮುನೇನಕೊಪ್ಪ (ನವಲಗುಂದ) :- ಮಾನ್ಯ ಅಧ್ಯಕ್ಷರೆ, ನವಲಗುಂದ ವ್ಯಾಪ್ತಿಯಲ್ಲಿ ಬರುವಂತಹ ನೀರಾವರಿ ಪ್ರದೇಶದಲ್ಲಿ ಈಗ ನೀರಿನ ಒಳ ಹರಿವು ಕಡಿಮೆಯಾಗಿದೆ ಎನ್ನುವುದು ಉತ್ತರದಲ್ಲಿದೆ. ಕಳೆದ 30

ವರ್ಷದಿಂದ ನೀರಾವರಿ ಯೋಜನೆಗಳಲ್ಲಿ ಸಮಸ್ಯೆಗಳಿವೆ. ಇದರ ಬಗ್ಗೆ ಇಬ್ಬರು ರೈತರನ್ನು ಕಳೆದುಕೊಂಡಿರುವಂತಹ ಉದಾಹರಣೆಗಳಿವೆ ಎನ್ನುವುದನ್ನು ಸಭೆಯ ಗಮನಕ್ಕೆ ತರಲು ಬಯಸುತ್ತೇನೆ. ಕಳೆದ 21 ಜುಲೈ 1980 ರಲ್ಲಿ ರೈತರ ಹೊಲಗಳಿಗೆ ಸರಿಯಾಗಿ ನೀರನ್ನು ಕೊಡುವುದಿಲ್ಲ ಎನ್ನುವ ಒಂದೇ ಕಾರಣಕ್ಕೆ ಅವತ್ತು ಕರ ಆಕರಣೆ ಮಾಡಿರುವ ಒಂದೇ ಉದಾಹರಣೆಯಿಂದ ಅವತ್ತಿನ ನರಗುಂದ ಮತ್ತು ನವಲಗುಂದದಲ್ಲಿ ರೈತರ ಬಂಡಾಯವಾಗಿ ಇಬ್ಬರು ರೈತರನ್ನು ಕಳೆದುಕೊಂಡಿದ್ದೇವೆ. ಇವತ್ತೂ ಕೂಡ ಆ ನೀರಾವರಿ ಯೋಜನೆಗೆ ಚಾಲನೆಯನ್ನು ಕೊಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಿಲ್ಲ ಎನ್ನುವುದು ಬಹಳ ವಿಷಾದನೀಯವಾದ ಸಂಗತಿಯೆಂದು ಹೇಳಬಯಸುತ್ತೇನೆ.

ಇವೊತ್ತು ಈ ಯೋಜನೆ ಕಳೆದ 29 ವರ್ಷದಲ್ಲಿ ಈ ಕಾಲುವೆಗಳು ಆದಮೇಲೆ ಒಂದು ಸಾರಿ ಮಾತ್ರ ಆ ಕಾಲುವೆಗಳಿಗೆ ನೀರು ಬಂದಿದೆ. ಸುಮಾರು 50 ಸಾವಿರ ರೈತರು ಮತ್ತು 5 ಹಳ್ಳಿಗಳಲ್ಲಿ ಸುಮಾರು ಆರು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಇವೊತ್ತಿಗೂ ಕೂಡ ಒಂದು ಹನಿ ನೀರಾವರಿಯನ್ನು ಕೊಡುವುದಕ್ಕಾಗದಂಥ ಈ ವ್ಯವಸ್ಥೆಯನ್ನು ನೋಡಿದರೆ ಬಹಳ ದುರಾದೃಷ್ಟಕರ ಸಂಗತಿ ಎಂದು ನಾನು ಹೇಳಬಯಸುತ್ತೇನೆ. ಇವೊತ್ತು ನವಲಗುಂದ ಪ್ರದೇಶದಲ್ಲಿ ವಿಶೇಷವಾಗಿ ಮಲಪ್ರಭಾದಿಂದ ಪ್ರಾರಂಭದ ಹಂತದಲ್ಲಿರತಕ್ಕಂಥ ಒಂದು ತಾಲ್ಲೂಕು ಎಂದರೆ ಅದು ನವಲಗುಂದ ತಾಲ್ಲೂಕಾಗಿದೆ. ಇವೊತ್ತು ಮಲಪ್ರಭಾದಿಂದ ಕೇವಲ 30 ಕಿ.ಮೀ. ವ್ಯಾಪ್ತಿಯಲ್ಲಿ ಬರತಕ್ಕಂಥ ಈ ಯೋಜನೆ ಬಗ್ಗೆ ಬಹಳ ವಿಶೇಷವಾಗಿ ಗಮನವನ್ನು ಕೊಟ್ಟು ಅತಿ ಶೀಘ್ರದಲ್ಲಿಯೇ ಈ ಸದನದ ಮೂಲಕ ಇವೊತ್ತು ನಮ್ಮ ಜೊತೆಯಲ್ಲಿರತಕ್ಕಂಥವರು ಮತ್ತು ರೈತರ ಯಾವುದೇ ತೊಂದರೆಯನ್ನು ನೀಗಲಾಡಿಸಲು ಸ್ಪಂದಿಸತಕ್ಕಂಥ ಸಮಯದಲ್ಲಿ ನಮ್ಮ ಜೊತೆ ಹೋರಾಟ ಮಾಡಿರತಕ್ಕಂಥವರು ಇವೊತ್ತು ನೀರಾವರಿ ಮಂತ್ರಿಗಳಾಗಿರುವುದರಿಂದ ಇವೊತ್ತು ಅವರ ಜೊತೆ ನರಗುಂದದ ಸಿ.ಸಿ. ಪಾಟೀಲರು ಮತ್ತು ನಾನು ಮತ್ತು ಇನ್ನೂ ಅನೇಕರು ಆ ಭಾಗದಿಂದ ಶಾಸಕರಾಗಿ ಈ ಸದನದಲ್ಲಿದ್ದೇವೆ. ಇವೊತ್ತು ಆ ಭಾಗದಲ್ಲಿ ವಿಶೇಷವಾಗಿ ನೀರಿನ ಸೌಲಭ್ಯವಂಚಿತ ತಾಲ್ಲೂಕಿಗೆ ನೀರನ್ನು ಒದಗಿಸಿಕೊಡಬೇಕೆಂದು ಒತ್ತಾಯವನ್ನು ಈ ಸದನದ ಮೂಲಕ ಮಾನ್ಯ ಮಂತ್ರಿಗಳಲ್ಲಿ ಮಾಡಬಯಸುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ (ನೀರಾವರಿ ಸಚಿವರು):-ಸನ್ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಉತ್ತರದಲ್ಲಿ ಹೇಳಿರುವಂತೆ 44 ಟಿ.ಎಂ.ಸಿ. ನೀರು ಹಂಚಿಕೆಯಾಗಬೇಕಾಗಿದೆ. ಬಹಳ ವಿಷಾಧನೀಯ ಸಂಗತಿಯೇನೆಂದರೆ, ಹಲವಾರು

ಕಾರಣಗಳಿಂದ ಮಲಪ್ರಭಾದಲ್ಲಿ ಒಳಹರಿವು ಕಡಿಮೆಯಾಗಿದೆ. ಇವೊತ್ತು ಕೇವಲ 27 ಟಿ.ಎಂ.ಸಿ. ಯಂತೆ average ಬರುತ್ತಿದೆ. ಅವರು ಪ್ರಸ್ತಾಪಿಸಿರುವಂಥ 3420 ಹೆಕ್ಟೇರ್, ಅಂದರೆ ಸುಮಾರು 7 ಸಾವಿರ ಎಕರೆ ಅಳಗವಾಡಿ ಭಾಗದಲ್ಲಿ ವಿಶೇಷವಾಗಿ ಅಲ್ಲಿ ನೀರನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅದಕ್ಕೆ ಕಾರಣಗಳು ಹಲವಾರು ಇವೆ. ಅಲ್ಲಿ ಈಗಾಗಲೇ ಕಾಲುವೆ ಸುಧಾರಣೆ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಏಕೆಂದರೆ ಅಲ್ಲಿ ಕಾಲುವೆಗಳಲ್ಲಿ ಮಣ್ಣು, ಹೂಳು ತುಂಬಿರತಕ್ಕಂಥದ್ದನ್ನು ತೆಗೆಯುವುದಕ್ಕೆ ಸುಧಾರಣೆ ಕ್ರಮವನ್ನು ಈಗಾಗಲೇ ತೆಗೆದುಕೊಂಡಿದ್ದೇವೆ. ಇನ್ನೂ ಅಲ್ಲಿ ಕೆಲವು ಕಡೆಗಳಲ್ಲಿ ಅಕ್ರಮವಾಗಿ ಕೂಡ ನೀರಾವರಿಯಾಗುತ್ತಿದೆ. ಆದರೆ ಅದಕ್ಕಿಂತ ಮುಖ್ಯವಾಗಿ ಅಲ್ಲಿ ಏನು ಸಫರಿಂಗ್ ಅಚ್ಚುಕಟ್ಟು ಇದೆ ಅದಕ್ಕೆ ನೀರನ್ನು ಕೊಡಲು ಈಗಾಗಲೇ ಎರಡು ಯೋಜನೆಗಳನ್ನು ನಾವು ಮಾಡಿದ್ದೇವೆ. ಇಬ್ಬರು ಟಿ.ಎ.ಸಿ. ಮೆಂಬರ್‌ಗಳನ್ನು ಅಲ್ಲಿಗೆ ವಿಶೇಷವಾಗಿ ಕಳುಹಿಸಿ ಅಲ್ಲಿ ಅಧ್ಯಯನವನ್ನು ಮಾಡಿ ಈ ಎರಡು ಲಿಫ್ಟ್ ಯೋಜನೆಗಳನ್ನು ಅವರು ತಮ್ಮ ಶಿಫಾರಸ್ಸಿನಲ್ಲಿ ತಿಳಿಸಿದ್ದಾರೆ. ಒಂದು ಅಮರಗೊಂಡ ಎಲ್.ಐ.ಸಿ., ಅದು 1317 ಹೆಕ್ಟೇರ್‌ಗೆ, ಇನ್ನೊಂದು ಗೊಬ್ಬರಗುಬ್ಬಿ ಲಿಫ್ಟ್ ಇರಿಗೇಶನ್, ಅದು 2130 ಹೆಕ್ಟೇರ್‌ಗೆ, ಹೀಗೆ ಒಟ್ಟು 3420 ಹೆಕ್ಟೇರ್‌ಗೆ ಎರಡು ಲಿಫ್ಟ್‌ನ್ನು ಈಗಾಗಲೇ ಅವರು ಹೇಳಿದ್ದಾರೆ. ಒಂದಕ್ಕೆ 16.5 ಕೋಟಿ ಇನ್ನೊಂದು 13 ಕೋಟಿ 25 ಲಕ್ಷ ರೂ.ಗಳದ್ದು. ಈಗಾಗಲೇ ಇದರ ಬಗ್ಗೆ ಸಂಪೂರ್ಣವಾದ ಒಂದು ತಾಂತ್ರಿಕ ವರದಿ ಟಿ.ಎ.ಸಿ. ಮುಂದೆ ಬರುತ್ತಿದೆ. ಆದಷು ಬೇಗನೆ ಟಿ.ಎ.ಸಿ.ಯಲ್ಲಿ ಅನುಮೋದನೆಯನ್ನು ಪಡೆದು, ನಮ್ಮ ಬೋರ್ಡ್ ಅನುಮೋದನೆಯನ್ನೂ ಕೂಡ ಪಡೆದು ಕೂಡಲೇ ಕಾಮಗಾರಿಯನ್ನು ತೆಗೆದುಕೊಳ್ಳುತ್ತೇವೆ. ಸಫರಿಂಗ್ ಅಚ್ಚುಕಟ್ಟು ಏನಿದೆ ಅದಕ್ಕೆ ನೀರನ್ನು ಒದಗಿಸಲು ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಸಿ.ಸಿ. ಪಾಟೀಲ್:-ಮಾನ್ಯ ಉಪಾಧ್ಯಕ್ಷರೆ, ಅದಕ್ಕೆ ಪೂರಕವಾಗಿ ಒಂದೆರಡು ಮಾತುಗಳನ್ನು ತಮ್ಮ ಅನುಮತಿ ಪಡೆದು ಕೇಳುತ್ತಿದ್ದೇನೆ. ಮಾನ್ಯ ನೀರಾವರಿ ಸಚಿವರಲ್ಲಿ ತಮ್ಮ ಮುಖಾಂತರ. ನಾನು ವಿನಂತಿಸಿಕೊಳ್ಳುವುದೇನೆಂದರೆ, ನಮ್ಮಲ್ಲಿರತಕ್ಕಂಥ main canals and distribution ಗಳ ಸಂಪೂರ್ಣವಾದಂಥ ನವೀಕರಣ ಮತ್ತು ಈ ಮಲಪ್ರಭಾ ಪ್ರಾಜೆಕ್ಟ್‌ಗೆ ಸಂಬಂಧಪಟ್ಟಂಥ ನೀರು ಬಳಕೆದಾರರ ಸಂಘಗಳು ನಿಷ್ಕ್ರಿಯತೆಗಳಿಂದ ಕೂಡಿರುವುದರಿಂದ ಆ ಬಳಕೆದಾರರ ಸಂಘಗಳನ್ನು ರದ್ದುಪಡಿಸುವುದಕ್ಕೆ ಏನಾದರೂ ಸರ್ಕಾರದ ಮುಂದೆ ಚಿಂತನೆ ಇದೆಯೆ ಎನ್ನುವಂಥ ಪ್ರಶ್ನೆಯನ್ನು ತಮ್ಮ ಮುಖಾಂತರ

ನಾನು ನೀರಾವರಿ ಸಚಿವರಲ್ಲಿ ಕೇಳುತ್ತೇನೆ. ಅದರ ಜೊತೆಗೆ main canal ಹಾಗೂ distributor ಗಳನ್ನು ಸಂಪೂರ್ಣವಾಗಿ re-modeling ಕಾರ್ಯಕ್ರಮವನ್ನು ಕೂಡ ತೆಗೆದುಕೊಳ್ಳಬೇಕೆನ್ನುವಂಥ ಒಂದು ಮನವಿಯನ್ನು ತಮ್ಮ ಮುಖಾಂತರ ಅವರಿಗೆ ಮಾಡಿಕೊಳ್ಳುತ್ತಿದ್ದೇವೆ.

ಶ್ರೀ ಜಗದೀಶ್ ವಿರೂಪಾಕ್ಷಪ್ಪ ಮೆಟಗುಡ್:-ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ಹೆಚ್ಚು ಹೂಳು ತುಂಬಿರುವುದರಿಂದ ಕೇವಲ 15 ರಿಂದ 20 ಟಿ.ಎಂ.ಸಿ. ನೀರು ಮಾತ್ರ ಸಂಗ್ರಹವಾಗುತ್ತಿದೆ. ಅದಲ್ಲದೇ ಈಗಾಗಲೇ ಅಲ್ಲಿ ನಾಲ್ಕು ಸಲ ಶುದ್ಧಿ ಮಾಡಿ ನೀರನ್ನು ಕುಡಿಯುವಂಥ ಕೆಲಸವನ್ನು ಮಾಡುತ್ತಾರೆ. ಅಲ್ಲಿ ನೀರಿನಲ್ಲಿ ವೇಸ್ಟ್ ಎಷ್ಟಿದೆ ಎಂಬ ಬಗ್ಗೆ ಯಾರೂ ಕೂಡ ವಿಚಾರ ಮಾಡುತ್ತಿಲ್ಲ. ಅದರ ಬಗ್ಗೆ ಪರಿಶೀಲನೆ ಮಾಡಿ ನೀರು ಕುಡಿಯುವ ಬಗ್ಗೆ ವಿಚಾರ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ:-ಮಾನ್ಯ ಉಪಾಧ್ಯಕ್ಷರೆ, ಅವರು ಹೇಳಿರುವುದರ ಬಗ್ಗೆ ಪರಿಶೀಲನೆಯನ್ನು ಮಾಡುತ್ತೇವೆ. ಆದರೆ ಅದಕ್ಕೂ ಮೊದಲು ಅವರು ಹೇಳಿದ ಪ್ರಶ್ನೆ ಈಗ ಉದ್ಭವಿಸುವುದಿಲ್ಲ. ಏಕೆಂದರೆ ಈ ಗಮನ ಸೆಳೆಯುವ ಸೂಚನೆ ಏನಿದೆ ಅದರೊಳಗೆ ಈ ಪ್ರಶ್ನೆ ಬರುವುದಿಲ್ಲ.

(ಆ) ವಿಷಯ:- <u>ಗುಲಬರ್ಗಾ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಘತ್ತರಗಾ ಗ್ರಾಮದ ಶ್ರೀ ಭಾಗ್ಯವಂತಿ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಭಾರಿ ಪ್ರಮಾಣದಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ನ್ಯಾಯಾಂಗ ತನಿಖೆ</u> :

ಶ್ರೀ ಸಿ.ಎಸ್. ನಾಡಗೌಡ (ಶ್ರೀ ವಸಾಲೀಕಯ್ಯ ಗುತ್ತೇದಾರ್ ಪರವಾಗಿ) :-ಮಾನ್ಯ ಉಪಾಧ್ಯಕ್ಷರೆ, ಗುಲಬರ್ಗಾ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಘತ್ತರಗಾ ಗ್ರಾಮದ ಶ್ರೀ ಭಾಗ್ಯವಂತಿ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಭಾರಿ ಪ್ರಮಾಣದಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಸತ್ಯಾಸತ್ಯತೆಯನ್ನು ತಿಳಿಯಲು ಮತ್ತು ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಂಡು ಸದರಿ ಪ್ರಕರಣವನ್ನು ನ್ಯಾಯಾಂಗ ತನಿಖೆ ನಡೆಸುವಂತೆ ವಸತಿ ಮತ್ತು ಮುಜರಾಯಿ ಸಚಿವರ ಗಮನವನ್ನು ಸೆಳೆಯುತ್ತೇನೆ.